**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 856/2018**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು. ಪಿಡಬ್ಲ್ಯೂ 6**

**ದಿನಾಂಕಃ 24.08.2026 ಸಿಡಬ್ಲ್ಯೂ 13**

| | |
|---|---|
| ಹೆಸರು | ರಾಮಕೃಷ್ಣ |
| ತಂದೆಯ ಹೆಸರು | ಬಸವಕೋಟೇಶ್ವರರಾವ್ |
| ವಯಸ್ಸು | 49 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಗಂಗಾವತಿ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.1 ನನ್ನ ಹೆಂಡತಿ. ಮೃತ ಚಂದನ್ ಮತ್ತು ಸಂತೋಷಿರವರ ಪರಿಚಯ ಇರುತ್ತದೆ. ದಿಃ23.05.2018 ರಂದು ಬೆಂಗಳೂರಿನಿಂದ ಬೈಲಹೊಂಗಲಕ್ಕೆ ನನ್ನ ಕಾರ್ ಸಂ.ಕೆಎ-03 4765 ಐ 20 ಕಾರಿನಲ್ಲಿ ನಾನು, ನನ್ನ ಹೆಂಡತಿ, ಚಂದನ್ ಮತ್ತು ಸಂತೋಷರವರು ಹೋಗುತ್ತಿರುವಾಗ ಹರಿಹರ ಹತ್ತಿರ ಬೆಳಗಿನ ಜಾವಾ 3 ಗಂಟೆಗೆ ರಾಷ್ಟ್ರೀಯ ಹೆದ್ದಾರಿಯ ಒಂದು ಡಾಬಾದ ಹತ್ತಿರ ಅಪಘಾತವಾಗಿರುತ್ತದೆ. ಲಾರಿ ಯಾವುದೇ ಇಂಡಿಕೇಟರನ್ನು ಹಾಕದೇ ಲಾರಿಗೆ ಏನೋ ತೊಂದರೆ ಇದೆ ಎಂದು ರಸ್ತೆಯಲ್ಲಿ ನಿಲ್ಲಿಸಿದ್ದರಿಂದ ಲಾರಿಗೆ ಹೋಗಿ ಡಿಕ್ಕಿ ಪಡಿಸಿರುತ್ತೇವೆ. ಅಪಘಾತದಲ್ಲಿ ನನಗೆ ಕಣ್ಣಿಗೆ, ಭುಜಕ್ಕೆ, ತಲೆಗೆ ಪೆಟ್ಟಾಗಿರುತ್ತದೆ. ನನ್ನ ಹೆಂಡತಿಗೂ ಸಹ ಎಡಭುಜ, ತಲೆಗೆ, ಕಾಲಿಗೆ ಪೆಟ್ಟಾಗಿರುತ್ತದೆ. ಹಿಂದೆ ಕೂತಿದ್ದ ಚಂದನ್ ಮತ್ತು ಸಂತೋಷಿರವರಿಗೆ ತಲೆಗೆ ಏಟು ಬಿದ್ದು ಸ್ಥಳದಲ್ಲಿಯೇ ಮರಣ ಹೊಂದಿರುತ್ತಾರೆ. ನಂತರ ಪೋಲೀಸರು ಸ್ಥಳಕ್ಕೆ ಬಂದು ನಮ್ಮನ್ನು ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಮರುದಿನ ಪೋಲೀಸರು ಆಸ್ಪತ್ರೆಗೆ ಬಂದು ನನ್ನ ಹೆಂಡತಿಯಿಂದ ಹೇಳಿಕೆಯನ್ನು ಪಡೆದುಕೊಂಡಿರುತಾತರೆ. ಲಾರಿ ಚಾಲಕನ ಹೆಸರು ಕುರಂ ಪಾಷಾ ಎಂದು ಗೊತ್ತಾಗಿರುತ್ತದೆ ಅವರನ್ನು ನೋಡಿದರೆ ನಾನು ಗುರುತಿಸುತ್ತೇನೆ. ಆರೋಪಿತರು ಗೈರುಹಾಜರಿದ್ದು ಆರೋಪಿತನ ಗುರುತಿಸುವಿಕೆಯಲ್ಲಿ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀ ಜಿ ಕೆ ಡಿ ವಕೀಲರಿಂದಃ

ನಾವು ಬೆಂಗಳೂರಿನಿಂದ ರಾತ್ರಿ 10 ಗಂಟೆಗೆ ಬಿಟ್ಟಿರುತ್ತೇವೆ. ರಾತ್ರಿ 10 ಗಂಟೆ ನಂತರ ಮಲಗುವ ಸಮಯ ಎಂದರೆ ಸರಿ. ನಾವು ಎಲ್ಲ ಒಟ್ಟಿಗೇ ಕಾರಿನಲ್ಲಿ ಬಂದಿರುತ್ತೇವೆ. ಗುನ್ನಾ ಸ್ಥಳದಲ್ಲಿ ಬೈಪಾಸ್ ಇರುವುದರಿಂದ ಕಾರುಗಳು ವೇಗವಾಗಿ ಬರುತ್ತವೆ ಎಂದರೆ ಸರಿ. ನಾನು ಸದರಿ ದಿನ ಕಾರನ್ನು 80 ರಿಂದ 90 ವೇಗದಲ್ಲಿ ಚಲಾಯಿಸುತ್ತಿದ್ದೆನು. ಡಾಬಾದ ಹತ್ತಿರ ವಾಹನ ನಿಲ್ಲಲು ಸ್ಥಳಾವಕಾಶ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಆರೋಪಿತನು ಲಾರಿಯನ್ನು ರಸ್ತೆಯಲ್ಲಿ ನಿಲ್ಲಿಸಿದ್ದನು ಎಂದು ಉತ್ತರಿಸುತ್ತಾರೆ. ನಾನು ಕಾರನ್ನು

ಅತೀವೇಗವಾಗಿ ಬಂದು ಲಾರಿಗೆ ಡಿಕ್ಕಿ ಪಡಿಸಿರುತ್ತೇನೆ ಎಂದರೆ ಸಾಕ್ಷಿಯು ಲಾರಿಯವನು ಯಾವುದೇ ಇಂಡಿಕೇಟರ್ ಹಾಕಿರುವುದಿಲ್ಲ ಎಂದು ಉತ್ತರಿಸುತ್ತಾರೆ. 3 ಗಂಟೆ ಸಮಯದಲ್ಲಿ ನಿದ್ದೆ ಮಂಪರು ಇರುತ್ತದೆ ಎಂದರೆ ಸಾಕ್ಷಿ ನನಗೆ ನಿದ್ದೆ ಬಂದಿರಲಿಲ್ಲ ಎಂದು ಉತ್ತರಿಸುತ್ತಾರೆ. ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ. ನನ್ನ ನಿರ್ಲಕ್ಷ್ಯತನದಿಂದ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತ ಆರೋಪಿತನ ನಿರ್ಲಕ್ಷ್ಯತನದಿಂದ ಆಗಿರುವುದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ.